ಮನೆಯಲ್ಲಿ ದುಡಿಮೆಗಾಗಿ ಇಟ್ಟುಕೊಳ್ಳಲು ಮನಸ್ಸಿರಲಿಲ್ಲ. ಕಷ್ಟವೋ, ಸುಖವೋ ನಮ್ಮ ಸಂಸಾರದ ಜಂಜಾಟದಲ್ಲಿ ಮಗಳ ಸಂಸಾರ ಹಾಳಾಗುವುದು ಬೇಡ ಎಂದು ಮದುವೆಗೆ ಪ್ರಯತ್ನ ಪಡುತ್ತಲೇ ಇದ್ದಳು. ಹೀಗೆನ್ನುತ್ತಲೇ ವಿಜೂವಿನ ಜೀವನದ 28 ವಸಂತಗಳು ಉರುಳಿದ್ದವು. ಹಾಗಾಗಿ ವಿಜೂವಿನ ಮದುವೆಯಾದ ನಂತರ ನಿಮ್ಮಿಬ್ಬರ ಮದುವೆ ಎಂದು ಸುಜಳಿಗೆ ಖಡಾಖಂಡಿತವಾಗಿ ಹೇಳಿದ್ದಳು. ಸುಜಳೂ ಸದ್ಯ ಮದುವೆಗೆ ಒಪ್ಪಿಗೆ ಸಿಕ್ಕಿತಲ್ಲ, ಅಷ್ಟು ಸಾಕು ಮದುವೆ ಸ್ವಲ್ಪ ಲೇಟಾದರೂ ಓಕೆ ಅಲ್ಲಿಯ ತನಕ ಪ್ರಣಯದ ಪಕ್ಷಿಗಳ ಹಾಗೆ ಹಾರಾಡಬಹುದು ಎಂದು ಆಲೋಚಿಸಿ ಸುಮ್ಮನಾಗಿದ್ದಳು.

ತನ್ನ ಕಪ್ಪುಬಣ್ಣದ ಬಗ್ಗೆ ಮೊದಲೇ ಬರುವ ಗಂಡುಗಳಿಗೆ ತಿಳಿಸಿ ಬಿಡಮ್ಮಾ ಎಂದು ಅಲವತ್ತುಕೊಳ್ಳುತ್ತಿದ್ದಳು. ಹಾಗಾಗಿ ಈಗ ಮೊದಲೇ ಬ್ರೋಕರಿಗೆ ಹೇಳಿಬಿಟ್ಟಿದ್ದರು. ಈಗ ಇನ್ನೊಂದು ರೀತಿಯ ಪೇಚಾಟ ಶುರುವಾಗಿತ್ತು, ಕಪ್ಪು ಎಂದು ಗೊತ್ತಾದ ಮೇಲೆ ವಿಜಯಾಳಿಗಿಂತ ಸಾಕಷ್ಟು ವಯಸ್ಸಿನಲ್ಲಿ ದೊಡ್ಡವರು, ವಿಧುರರು, ಸ್ವಲ್ಪ ಅಂಗವಿಕಲತೆ ಹೊಂದಿರುವವರು ಹೆಚ್ಚಾಗಿ ನೋಡಲು ಬರುತ್ತಿದ್ದರು. ಇದು ಇನ್ನೊಂದು ರೀತಿಯಲ್ಲಿ ನುಂಗಲಾರದ ತುತ್ತಾಗಿತ್ತು ಮನೆಯಲ್ಲಿ. ವಯಸ್ಸಾದ ಹುಡುಗನ ಸಂಬಂಧಿಕರಂತೂ ಬ್ರೋಕರ್‌ಗೆ ಗಂಟೇ ಬಿದ್ದುಬಿಟ್ಟಿದ್ದರು. ಆ ಹುಡುಗಿಗೆ ಸರ್ಕಾರಿ ನೌಕರಿ ಬಿಟ್ಟರೆ ಬೇರೆ ಏನಿದೆ? ನಮ್ಮ ಹುಡುಗ ಆಕೆಗಿಂತ ಹೆಚ್ಚಾಗಿಯೇ ದುಡಿಯುತ್ತಾನೆ, ಅವಳ ಸಂಬಳವೂ ನಮಗೇನು ಬೇಕಾಗಿರಲಿಲ್ಲ. ರೂಪವಿಲ್ಲ, ಆಸ್ತಿವಂತರಲ್ಲ, ನೆಟ್ಟಗೆ ವರದಕ್ಷಿಣೆ ಕೊಟ್ಟು ಮದುವೆ ಮಾಡುವುದಕ್ಕೂ ಯೋಗ್ಯತೆ ಇಲ್ಲ, ತಲೆ ಆಗಲೇ ಅರ್ಧ ನೆರೆತಿದೆ, ಏನೋ ನಮ್ಮ ಹುಡುಗನ ವಯಸ್ಸು ಸ್ವಲ್ಪ ಹೆಚ್ಚಿರಬಹುದು, ಇದಕ್ಕಿಂತ ಬೇರೆ ಗಂಡು ಬೇಕಂತೇನು, ಸುಮ್ಮನೆ ನಮ್ಮ ಹುಡುಗನಿಗೆ ಕೊಟ್ಟು ಮದುವೆ ಮಾಡಲು ಒಪ್ಪಿಸಿ, ಎಂದು ಶೂಲದಿಂದ ಚುಚ್ಚುವ ಹಾಗೆ ಮಾತನಾಡಿದ್ದರು. ಇದನ್ನೆಲ್ಲಾ ನೋಡುತ್ತಾ ಜಯಾಳಿಗೆ ವಿಜಯಳ ಮದುವೆ ಎಲ್ಲಿ ಮರೀಚಿಕೆಯಾಗುವುದೋ ಎಂಬ ಆತಂಕ ಸದಾ ಕಾಡತೊಡಗಿತ್ತು.

ಇತ್ತ ವಿಜಯಳಿಗೆ ಇನ್ನೊಂದು ಧರ್ಮಸಂಕಟ ಶುರುವಾಗಿತ್ತು. ಅದೇನೆಂದರೆ ಅವರಪ್ಪನ ಜೊತೆ ಸದಾ ಗುಟಕಾ ಪ್ಯಾಕೆಟ್‌ನಂತೆ ಸಂಗಾತಿಯಾಗಿದ್ದ ಗೆಳೆಯ ವೆಂಕಟರಮಣ. ದೂರದ ಸಂಬಂಧಿಯಾಗಿದ್ದ ಅವನನ್ನು ಚಿಕ್ಕ ವಯಸ್ಸಿನಿಂದಲೂ ಅವನನ್ನು ಮಾಮಾ ಎಂದೇ ಕರೆಯುತ್ತಿದ್ದಳು. ಬಡ್ಡಿ ವ್ಯವಹಾರ ಮಾಡಿಕೊಂಡು ಆರಾಮವಾಗಿ ಜೀವನ ಸಾಗಿಸುತ್ತಿದ್ದ ಆಸಾಮಿ. ಆದರೆ ಈಗೀಗ ಅವನ ನೋಟ ಏಕೋ ವಿಜೂವಿಗೆ ಸರಿ ಬರುತ್ತಿರಲಿಲ್ಲ. ತನಗಿಂತ ದೊಡ್ಡ ವಯಸ್ಸಿನ ಮಗನಿದ್ದರೂ ಆತನಿಗೆ ಹೆಣ್ಣಿನ ಚಪಲ ತುಂಬಾ ಇದೆ ಎಂದು ಬಹುಬೇಗನೆ ಅರ್ಥ ಮಾಡಿಕೊಂಡಿದ್ದಳು. 'ಮಗಳಿನ ಹಾಗೆ ನೀನು' ಎನ್ನುತ್ತಾ ಬೆನ್ನು ಸವರುವುದು, ಮೈಮುಟ್ಟುವುದು ಮಾಡುತ್ತಿದ್ದ ಅವನನ್ನು ಕಂಡರೆ ಸಿಟ್ಟು ನೆತ್ತಿಗೇರುತ್ತಿತ್ತು. ಆದಷ್ಟು ಅವನಿಂದ ದೂರವೇ ಇರುತ್ತಿದ್ದಳು. ನಮ್ಮ ಹುಡುಗಿ ಯಾವುದರಲ್ಲಿ ಕಡಿಮೆ ಇದ್ದಾಳೆ ಎಂದು ಅವನು ಸುಮ್ಮಸುಮ್ಮನೆ ಹೊಗಳಿ ಅಟ್ಟಕ್ಕೇರಿಸುತ್ತಿದ್ದ ಅವನ ಗುಣ ವಿಜೂವಿಗೆ ಜಿಗುಪ್ಸೆ ತರುತ್ತಿತ್ತು. ಅದೇ ತಂಗಿಯರ ತಂಟೆಗೆ ಹೋಗುತ್ತಿರಲಿಲ್ಲ ಅದೊಂದು ಪುಣ್ಯ ಎನ್ನಬೇಕು. ಮನೆಯಲ್ಲಿ ವಿಜೂ ಒಬ್ಬಳೇ ಇದ್ದಾಗ ಬೇಕಂತಲೇ ಬರುತ್ತಿದ್ದ. ನಿನ್ನ ಮದುವಗೆ ನಾನು ಸಹಾಯ ಮಾಡುತ್ತೇನೆ, ಏನೂ ಯೋಚಿಸಬೇಡ, ರಾಜಕುಮಾರನಂಥ ಹುಡುಗನನ್ನು ಹುಡುಕುತ್ತೇನೆ ಎಂದು ತಲೆ ಸವರಲು ಬರುತ್ತಿದ್ದ. ಅವನು ಬಂದಾಕ್ಷಣ ದಡದಡನೇ ಪಕ್ಕದ ಮನೆಯ ಚಿಕ್ಕ ಹುಡುಗಿಯನ್ನು ಬೇಕಂತಲೇ ಕರೆದು ತರುತ್ತಿದ್ದಳು. ಅವನು ಹೋಗುವವರೆಗೆ ಹೊರಗಡೆ ಬಾಗಿಲಿನಲ್ಲಿಯೇ ಕುಳಿತು ಅದರ ಜೊತೆ ಆಡುತ್ತಾ ಕಾಲಕಳೆಯುತ್ತಿದ್ದಳು.

ಅನಿವಾರ್ಯವಾಗಿ ಅವನು ಎದ್ದು ಹೋಗುತ್ತಿದ್ದ. ಬಹಳಷ್ಟು ಒಳ್ಳೆಯ ಸಂಬಂಧ ತಪ್ಪಿ ಹೋಗಲು ಇವನೂ ಒಂದು ರೀತಿಯಲ್ಲಿ ಕಾರಣನಾಗಿದ್ದ. ಪ್ರತೀ ಸಲ ಹುಡುಗನ ಕಡೆಯವರು ನೋಡಲು ಬಂದಾಗ ಇವನ ಹಾಜರಿ ಕಡ್ಡಾಯ ವಿರುತ್ತಿತ್ತು. ಅಷ್ಟೇ ಏಕೆ ಬರದಿದ್ದರೆ ಫೋನ್ ಮಾಡಿಯಾದರೂ ವಿಜೂವಿನ ಅಪ್ಪ ಕರೆಸುತ್ತಿದ್ದ. ಬರುವಾಗ ಒಂದಿಷ್ಟು ಸ್ವೀಟು, ಖಾರ, ಹೂವಿನ ಪ್ಯಾಕೆಟ್ ಹಿಡಿದೇ ಬರುತ್ತಿದ್ದ. ವಿಜೂವಿನ ಅಪ್ಪನಿಗಿಂತ ಬಂದವರ ಜೊತೆ ಇವನ ಮಾತುಕತೆಯೇ ಹೆಚ್ಚಿರುತ್ತಿತ್ತು. ನಮ್ಮ ಹುಡುಗಿಯನ್ನು ಬೇಕಾದಷ್ಟು ಓದಿಸಿದ್ದೇವೆ, ಒಂದು ನಯಾಪೈಸ ವರದಕ್ಷಿಣೆ ಕೊಡುವುದಿಲ್ಲ ಎಂದು ನೋಡಲು ಬಂದ ಗಂಡಿನವರ ಎದುರಿಗೆ ಖಡಾಖಂಡಿತವಾಗಿ ದರ್ಪದಿಂದಲೇ ಹೇಳುತ್ತಿದ್ದ. ಇಂಥ ಸಮಯದಲ್ಲಿ ಅಪ್ಪನಿಗೆ ಇವನನ್ನು ಕರೆದು ತರಬೇಡ ಎಂದು ಹೇಳಲು ಎಷ್ಟೋ ಸಲ ಮಾತು ನಾಲಿಗೆ ತುದಿಯವರೆಗೂ ಬರುತ್ತಿತ್ತು. ಆದರೆ ಹೇಳಲು ತಡವರಿಸುತ್ತಿತ್ತು. ಎಷ್ಟೋ ಕಷ್ಟದ ಸಮಯದಲ್ಲಿ ವೆಂಕಟರಮಣ ಹಣದ ಸಹಾಯ ಮಾತ್ರ ಧಾರಾಳವಾಗಿ ಮಾಡುತ್ತಿದ್ದ. ತಿಂಗಳ ಕೊನೆಗೆ ಅವನ ಸಹಾಯ ಬಹಳಷ್ಟು ಸಲ ಅನಿವಾರ್ಯವಾಗುತ್ತಿತ್ತು. ನಿಮ್ಮಪ್ಪ ಮತ್ತು ನೀವೆಲ್ಲಾ ನನಗೆ ತುಂಬಾ ಬೇಕಾದವರೂ ಅಂಥಾ ನೋಡಮ್ಮಾ ಕಡಿಮೆ ಬಡ್ಡಿದರದಲ್ಲಿ ಸಾಲ ಕೊಡುತ್ತೇನೆ ಎಂದು ಕೆಂಪಾದ ಹಲ್ಲುಗಳಲ್ಲಿ ಕಡ್ಡಿಯನ್ನು ತೂರಿಸುತ್ತಾ ಕಿಸಿಯುವಾಗ ಅವನು ಯಾವ ಅರ್ಥದಲ್ಲಿ ಹೇಳುತ್ತಿದ್ದಾನೆ ಎಂಬುದು ತಿಳಿದು ಹೇಸಿಗೆಯಾಗುತ್ತಿತ್ತು.

ಅವನ ಒಬ್ಬ ಮಗ ವಿಜಯಾಳದೇ ವಯಸ್ಸಿನವನು ಉಂಡಾಡಿ ಗುಂಡನಂತೆ ಅಲೆದುಕೊಂಡು ಭೂಮಿಗೆ ಭಾರವಾಗಿ ಬದುಕುತ್ತಿದ್ದ. ಕೆಟ್ಟ ಚಟಗಳ ಸಕಲ ಸದ್ಗುಣ ಸಂಪನ್ನನಾಗಿದ್ದ. ವೆಂಕಟರಮಣನ ಹೆಂಡತಿಗೆ ವಿಜಯಾಳನ್ನು ತನ್ನ ಸೊಸೆ ಮಾಡಿಕೊಳ್ಳಬೇಕೆಂದು ಗಂಡನಲ್ಲಿ ಆಗಾಗ ಪ್ರಸ್ತಾಪಿಸುತ್ತಿದ್ದಳು. ರೂಪವಿಲ್ಲದಿದ್ದರೇನಂತೆ, ದುಡಿಯುವ ಹುಡುಗಿಯಾದ್ದರಿಂದ ಸಾಯುವವರೆಗೂ ಮಗನ ಜೀವನಕ್ಕೆ ಭದ್ರತೆಯಾಗುತ್ತದೆ ಎಂಬ ದೂರಾಲೋಚನೆ ಜೊತೆಗೆ ದುರಾಲೋಚನೆಯೂ ಆಗಿತ್ತು. ಜೊತೆಗೆ ಅವನ ಚರಿತ್ರೆ ತುಂಬಾ ಪ್ರಸಿದ್ಧವಾದ್ದರಿಂದ, ಹೆಣ್ಣು ಕೊಡಲು ಯಾವ ಕನ್ಯಾಪಿತೃಗಳೂ ತಯಾರಿರಲಿಲ್ಲ. ತಮ್ಮ ನಂತರ ಮಗ ಯಾವಾಗ ರೇಸು, ಬೆಟ್ಟಿಂಗ್ ಅಂತ ಎಲ್ಲಾ ಆಸ್ತಿಯನ್ನು ಕಳೆಯುತ್ತಾನೋ ಗೊತ್ತಿಲ್ಲ. ವೆಂಕಟರಮಣ ಇರುವವರೆಗಂತೂ ಚಿಂತೆಯಿಲ್ಲ, ಹಾಗೆಲ್ಲಾ ಮಾಡಲು ಬಿಡುವವನಲ್ಲ, ಆದರೆ ಅವರಿಬ್ಬರ ನಂತರ ಇರುವ ಒಬ್ಬ ಮಗನದೇ ಕಾರುಬಾರಾದ್ದರಿಂದ ಯೋಚನೆಯಾಗಿತ್ತು. ವೆಂಕಟರಮಣನೂ ಆ ನಿಟ್ಟಿನಲ್ಲೇ ಯೋಚಿಸುತ್ತಿದ್ದ. ಜೊತೆಗೆ ವಿಜಯಾಳ ಬಗ್ಗೆ ವಿಚಿತ್ರ ಮೋಹ ಬೆಳೆಸಿಕೊಂಡಿದ್ದ. ಆದ್ದರಿಂದಲೇ ಬಂದ ಸಂಬಂಧಗಳಲ್ಲಿ ಆದಷ್ಟು ನಯವಾಗಿಯೇ ವ್ಯವಹರಿಸಿ ಸಂಬಂಧ ತಪ್ಪಿಹೋಗುವಂತೆ ವೆಂಕಟರಮಣ ಹಗ್ಗ ಹೊಸೆಯುತ್ತಿದ್ದ. ಹೇಗಿದ್ದರೂ ರೂಪವಿಲ್ಲ, ಇನ್ನೂ ವಯಸ್ಸೂ ಹೆಚ್ಚಾಯಿತೆಂದರೆ ಮದುವೆಯ ಮಾತು ವಿಜಯಾಳಿಗೆ ಕನಸೇ ಸರಿ. ಆಗ ತನ್ನ ಮಗನಿಗೆ ವಿಜಯಾಳ ಸಂಬಂಧ ಕೇಳಬಹುದು, ಕುಸಿಯುತ್ತಿದ್ದವರಿಗೆ ಹುಲ್ಲುಕಡ್ಡಿಯ ಆಸರೆ ಸಿಕ್ಕಾಗ ಸಂತೋಷವೇ ಆಗುವುದರಿಂದ ಸ್ವಾಮಿಕಾರ್ಯ, ಸ್ವಕಾರ್ಯ ಎರಡೂ ಆಗುತ್ತದೆ ಎಂದು ಮನದಲ್ಲಿಯೇ ಮಂಡಿಗೆ ತಿನ್ನುತ್ತಿದ್ದ.

ಜಯಾಳಿಗೂ ಈಗೀಗ ವಿಜೂವಿನ ಮದುವೆಯ ಬಗ್ಗೆ ಕನಸು ಕಾಣಲೂ ಹೆದರಿಕೆಯಾಗತೊಡಗಿತ್ತು. ಕಪ್ಪಾಗಿ ಹುಟ್ಟಿದ ಮಾತ್ರಕ್ಕೆ ಹೆಣ್ಣು ಇಷ್ಟೆಲ್ಲಾ ಕಷ್ಟಪಡಬೇಕೆಂದು ತಿಳಿದಿದ್ದರೆ ಹುಟ್ಟಿದಾಗಲೇ ಮಗುವಿನ ಕುತ್ತಿಗೆ ಹಿಸುಕಿ ಬಿಡುತ್ತಿದ್ದಳೇನೋ? ಬಣ್ಣ, ರೂಪು ಎಲ್ಲಾ ನಾವು ಬಯಸಿದಂತೆ ಸಿಗುತ್ತಿದ್ದರೆ ಜಗತ್ತೇ ಸುಂದರ ಹೆಣ್ಣುಮಕ್ಕಳಿಂದ ತುಂಬಿ ಹೋಗುತ್ತಿತ್ತೇನೋ ಎಂದು ಯೋಚಿಸುತ್ತಿದ್ದಳು. ಒಮ್ಮೊಮ್ಮೆ ತನ್ನ ಯೋಚನೆಗೆ ತಾನೇ ನಿಟ್ಟುಸಿರು ಬಿಡುತ್ತಿದ್ದಳು. ಮೊದಲೆಲ್ಲಾ ಗಂಡು, ಹೆಣ್ಣು ನೋಡುವ ರೂಢಿಯೇ ಇರಲಿಲ್ಲ. ದೊಡ್ಡವರೇ ಮನೆತನ ನೋಡಿ ಮದುವೆ ನಿರ್ಧರಿಸುತ್ತಿದ್ದರು. ಮದುವೆಯ ನಂತರವೇ ಗಂಡು ಹೆಣ್ಣು ಒಬ್ಬರಿಗೊಬ್ಬರು ನೋಡುತ್ತಿದ್ದು. ಹೇಗೇ ಇದ್ದರೂ ಒಟ್ಟಿಗೆ ಸಂಸಾರವಂತೂ ನಡೆದು ಹೋಗುತ್ತಿತ್ತು. ಈಗಿನ ಹಾಗೆ ರೂಪ, ಕೆಲಸ

## ಮಾಣಿಕ್ಯ

ಮಕ್ಕಳೇ ಮನೆಯ  
ಮಾಣಿಕ್ಯ  
ನೆತ್ತಿಯ ಮೇಲಿಟ್ಟುಕೊಂಡು  
ಮೆರೆದರೆ  
ಸಮಸ್ಯೆಗಳು ಅಸಂಖ್ಯ!

★ ಕೆ.ಬಿ.ರಂಗಸ್ವಾಮಿ


ಶಿಲ್ಪಾ ಕಬ್ಬಿಣಕಂತಿ